**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕೆ.ಆರ್.ನಗರ**

ಸಿಸಿ ನಂ. **578/2023**

**ಪಿರ್ಯಾದುದಾರರುಃ** ಶ್ರೀಮತಿ ಕಮಲ ಕೋಂ ರಮೇಶ್.ಎನ್,

--ವಿರುದ್ಧ –

**ಆರೋಪಿಃ** ಶ್ರೀ ನಂಜುಂಡ.ಜಿ ಬಿನ್ ಬಸವರಾಜು.ಎಸ್.ಪಿ,

## ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರಡಿ ಆರೋಪಿಯ ಹೇಳಿಕೆ

ಪ್ರಶ್ನೆ-1 ಫ್ರಾಸಾ-1 ಶ್ರೀಮತಿ ಕಮಲ ಕೋಂ ರಮೇಶ್.ಎನ್, ರವರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಆರೋಪಿಯಾದ ನೀವು ಫ್ರಾಸಾ-1 ರವರಿಗೆ ರೂ.4,80,000/- ಹಣವನ್ನು ಕಾನೂನು ಬದ್ಧವಾಗಿ ಕೊಡಬೇಕಾಗಿದ್ದು, ಅದರ ಮರು ಪಾವತಿಗಾಗಿ ನಿಮ್ಮ ಉಳಿತಾಯ ಖಾತೆ ಇರುವ **ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್, ಕೆ ಆರ್ ನಗರ ಶಾಖೆ**, ಸೇರಿದ ಚೆಕ್ ಸಂಖ್ಯೆ 732295 ದಿನಾಂಕ: 26.10.2023 ವನ್ನು ನಮೂದಿಸಿ ಕೊಟ್ಟಿದ್ದೀರೆಂದು ಸಾಕ್ಷ್ಯ ನುಡಿದಿರುತ್ತಾರೆ, ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ-2 ಫ್ರಾಸಾ-1 ಶ್ರೀಮತಿ ಕಮಲ ಕೋಂ ರಮೇಶ್.ಎನ್, ರವರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಮುಂದುವರೆದು ಸದರಿ ಚೆಕ್ಕನ್ನು ನಗದೀಕರಿಸಿಕೊಳ್ಳಲು, ತಮ್ಮ ಉಳಿತಾಯ ಖಾತೆ ಇರುವ **ನವನಗರ ಅರ್ಬನ್ ಬ್ಯಾಂಕ್, ಕೆ ಆರ್ ನಗರ ಶಾಖೆ**, ಇಲ್ಲಿಗೆ ಹಾಜರುಪಡಿಸಿದಾಗ, ಸದರಿ ಬ್ಯಾಂಕ್ ನವರು "**ಸಾಕಷ್ಟು ಹಣವಿಲ್ಲ**" ಎಂಬ ಹಿಂಬರಹದೊಂದಿಗೆ ದಿನಾಂಕ: 30.10.2023 ರಂದು ಚೆಕ್ಕು ಹಿಂದಿರುಗಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ, ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ-3 ಫ್ರಾ.ಸಾ.-1 ಶ್ರೀಮತಿ ಕಮಲ ಕೋಂ ರಮೇಶ್.ಎನ್, ರವರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಮುಂದುವರೆದು ಅವರು ತಮ್ಮ ವಕೀಲರ ಮುಖಾಂತರ ಆರೋಪಿಯಾದ ನಿಮಗೆ ನೊಂದಾಯಿತ ಅಂಚೆ ಮೂಲಕ ದಿಃ 04.11.2023 ರಂದು ತಿಳುವಳಿಕೆ ಪತ್ರ ಕಳುಹಿಸಿದರೂ ಸಹ ನೀವು ಕಾನೂನುಬದ್ಧವಾಗಿ ಪಾವತಿ ಮಾಡಬೇಕಾದ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ ನಿಮ್ಮ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಸಾಕ್ಷ್ಯ ನುಡಿದಿರುತ್ತಾರೆ, ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ:4 ನಿಮಗೆ ಬೇರೆ ಏನಾದರೂ ಹೇಳುವುದು ಇದೆಯಾ?
ಉತ್ತರ:

ಪ್ರಶ್ನೆ: 5 ನಿಮ್ಮ ಪರ ಸಾಕ್ಷಿದಾರರು ಇದ್ದಾರೆಯೆ?
ಉತ್ತರ:

(ಮೇಲ್ಕಂಡ ಆರೋಪದ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಿ ಆರೋಪಿ ನೀಡಿದ ಉತ್ತರಗಳನ್ನು ಸ್ವತಃ ನಾನೇ ಕೇಳಿಸಿಕೊಂಡು ನನ್ನ ಸ್ವ ಬರವಣಿಗೆಯಲ್ಲಿ ಉತ್ತರಗಳನ್ನು ನಮೂದು ಮಾಡಿರುತ್ತೇನೆ ಇವು ಆರೋಪಿ ತನ್ನ ಸ್ವಇಚ್ಛೆಯಿಂದ ನೀಡಿರುವ ಉತ್ತರಗಳಾಗಿರುತ್ತವೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

**ದಿನಾಂಕ: 07.11.2025**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆ ಆರ್ ನಗರ.**